25

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ. ಪ್ರಾಣೇಶ್ ಎಂ.ಕೆ, ಇವರು ನಿಯಮ 330ರಡಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರವನ್ನು ಒದಗಿಸುವ ಬಗ್ಗೆ.**

**ಪ್ರಶ್ನೆ:**

ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಬೆಳೆ ಸಮೀಕ್ಷೆಯನ್ನು ಸಾಫ್ಟ್‌ವೇರ್‌ನಲ್ಲಿ ಅಳವಡಿಸಲು ಗ್ರಾಮ ಲೆಕ್ಕಾಧಿಕಾರಿಗಳಿಗೆ ಅವಕಾಶ ಕಲ್ಪಿಸುವ ಬಗ್ಗೆ.

**ಉತ್ತರ:**

ರಾಜ್ಯ ಸರ್ಕಾರವು GPS ಆಧಾರಿತ ಮೊಬೈಲ್ ಆಪ್ ಮೂಲಕ ಬೆಳೆ ಸಮೀಕ್ಷೆ ಕಾರ್ಯ ಕೈಗೊಳ್ಳುತ್ತಿದ್ದು, ಸದರಿ ತಂತ್ರಾಂಶವನ್ನು ಸರ್ಕಾರದ ಇ-ಆಡಳಿತ ವಿಭಾಗ (CEG)ದಿಂದ ಅಭಿವೃದ್ಧಿಪಡಿಸಲಾಗಿರುತ್ತದೆ. ಬೆಳೆ ಸಮೀಕ್ಷೆಯನ್ನು ಕೃಷಿ, ತೋಟಗಾರಿಕೆ, ಕಂದಾಯ ಇಲಾಖೆ ಮತ್ತು ಖಾಸಗಿ ಸಿಬ್ಬಂದಿಗಳ ಮೂಲಕ ನಿರ್ವಹಿಸಲಾಗುತ್ತಿದೆ.

ಪ್ರಸ್ತುತ ಇ-ಆಡಳಿತ ಇಲಾಖೆಯು ಬೆಳೆ ಸಮೀಕ್ಷೆಯಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಆಯಾ ಋತುಮಾನ ಮುಗಿದ ನಂತರ ಭೂಮಿ ಉಸ್ತುವಾರಿ ಕೋಶಕ್ಕೆ ನೀಡುತ್ತಿದ್ದು, ಸದರಿ ಮಾಹಿತಿಯನ್ನು ಗ್ರಾಮಲೆಕ್ಕಿಗರ ಡಿಜಿಟಲ್ ಸಹಿ ಮೂಲಕ ಪಹಣಿಯಲ್ಲಿ ಇಂಡಿಕರಿಸಲಾಗುತ್ತಿದೆ. ಬೆಳೆ ಸಮೀಕ್ಷೆಯಲ್ಲಿ ನಮೂದಾದ ಬೆಳೆಗಳ ಬಗ್ಗೆ ರೈತರಿಗೆ ಆಕ್ಷೇಪಣೆ ಇದ್ದಲ್ಲಿ ಲಿಖಿತವಾಗಿ ಅಥವಾ 'ಬೆಳೆ ದರ್ಶಕ್' ಎಂಬ ಆಪ್ ಮೂಲಕ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಆದರೆ, ಬೆಳೆ ಸಮೀಕ್ಷೆಯಲ್ಲಿ ದತ್ತ ಸಂಗ್ರಹಣೆ ಪ್ರಕ್ರಿಯೆಯು 4 ರಿಂದ 6 ತಿಂಗಳುಗಳ ಸಮಯ ತೆಗೆದುಕೊಳ್ಳುವುದರಿಂದ ಪಹಣಿಯಲ್ಲಿ ಬೆಳೆ ಮಾಹಿತಿಯನ್ನು ಇಂಡಿಕರಿಸಲು ವಿಳಂಬವಾಗುತ್ತಿದೆ.

ಆದುದರಿಂದ, ಬೆಳೆ ಸಮೀಕ್ಷೆಯಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ತಕ್ಷಣವೇ ಭೂಮಿ ತಂತ್ರಾಂಶದಲ್ಲಿರುವ ಪಹಣಿಯಲ್ಲಿ ಇಂಡಿಕರಿಸಲು ಕಂದಾಯ ಇಲಾಖೆಯ ಭೂಮಿ ಉಸ್ತುವಾರಿ ಕೋಶವು ಇ-ಆಡಳಿತ ಇಲಾಖೆಯೊಂದಿಗೆ ವ್ಯವಹರಿಸುತ್ತಿದೆ ಹಾಗೂ ಮೊದಲ ಹಂತವಾಗಿ ಭೂಮಿ ವೆಬ್‌ಸರ್ವೀಸ್ ಅನ್ನು ಇ-ಆಡಳಿತ ಇಲಾಖೆಗೆ ನೀಡಲಾಗಿದೆ. ಈ ಬಗ್ಗೆ ತಾಂತ್ರಿಕ ಸಂಯೋಜನೆಯು ಪೂರ್ಣವಾದ ನಂತರ 'ಭೂಮಿ-ಕಾವೇರಿ' ಮಾದರಿಯಲ್ಲಿ ಭೂಮಿ ತಂತ್ರಾಂಶದಲ್ಲಿರುವ ಪಹಣಿಗಳಲ್ಲಿ ಬೆಳೆ ಸಮೀಕ್ಷೆ ಮಾಹಿತಿಯನ್ನು ನೇರವಾಗಿ ಅಳವಡಿಸಬಹುದಾಗಿರುತ್ತದೆ.

ಕಂಇ 34 ಎಂಆರ್‌ಆರ್ 2020

(ಆರ್. ಅಶೋಕ್)
ಕಂದಾಯ ಸಚಿವರು